# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ಕಾರ್ಪೋರೇಟ್ ಕಛೇರಿ ವಿಳಾಸ:
ನಿಗಮ ಕಾರ್ಯಾಲಯ, ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-570017
ದೂರವಾಣಿ: 0821-2417107
Website: www.cescmysore.org
CIN: U40109KA2004SGC035177

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),
ರವರ ಕಛೇರಿ ಸೆಸ್ಕ್, ನಗರ ಉಪವಿಭಾಗ, ಹಾಸನ
ಸಂತೇಪೇಟೆ, ಬಿ.ಎಂ. ರಸ್ತೆ, ಹಾಸನ-573201
ದೂರವಾಣಿ: 08172-268829
E-Mail: aeecsdhsn@rediffmail.com

ನಂ: ಸ.ಕಾ.ಅ(ವಿ)./ಸಇಂ(ತಾ)/ನ.ಉ.ವಿ./ಹಾಸನ/17-18/ 4794-99

ದಿನಾಂಕ: 05.02.2018

## "ಜನಸಂಪರ್ಕ ಸಭೆಯ ನಡಾವಳಿಗಳು"

ದಿನಾಂಕ: 18.01.2018 ರಂದು ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಅಧ್ಯಕ್ಷತೆಯಲ್ಲಿ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಲು ನಗರ ಉಪ-ವಿಭಾಗ ಕಛೇರಿಯಲ್ಲಿ ನಡೆದ **ಜನಸಂಪರ್ಕ ಸಭೆಯ** ನಡಾವಳಿಗಳು.

********

ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಸ್ವಾಗತಿಸುವ ಮೂಲಕ ಸಭೆಯನ್ನು ಬೆಳಗ್ಗೆ 11:00 ಗಂಟೆಗೆ ಪ್ರಾರಂಭಿಸಲಾಯಿತು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಹೆಸರು:**

1. ಶ್ರೀಮತಿ ಭಾರತಿ, ಕಾರ್ಯಪಾಲಕ ಇಂಜಿನಿಯರ್(ವಿ),, ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ.
2. ಶ್ರೀ ಮೋಹನ್ ಕುಮಾರ್ ಕೆ.ಕೆ., ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಹಾಸನ
3. ಶ್ರೀ ತೋಟಪ್ಪ, ಲೆಕ್ಕಾಧಿಕಾರಿ(ಆಂ ಮತ್ತು ಪ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹಾಸನ.
4. ಶ್ರೀಮತಿ ಮೇಘನ ಜೆ.ಎಂ, ಸಹಾಯಕ ಇಂಜಿನಿಯರ್(ತಾ), ನಗರ ಉಪವಿಭಾಗ, ಹಾಸನ.
5. ಶ್ರೀ ವಿನಯ್ ಕೆ.ಹೆಚ್, ಸಹಾಯಕ ಇಂಜಿನಿಯರ್(ವಿ), ಕೆ.ಆರ್ ಪುರಂ/ಉತ್ತರ ಬಡಾವಣೆ ಶಾಖೆ, ನಗರ ಉಪವಿಭಾಗ, ಹಾಸನ.
6. ಶ್ರೀ ಅಜಯ್ ಕುಮಾರ್, ಸಹಾಯಕ ಇಂಜಿನಿಯರ್(ವಿ), ಸಂತೇಪೇಟೆ ಶಾಖೆ, ನಗರ ಉಪವಿಭಾಗ, ಹಾಸನ.
7. ಶ್ರೀ ಅಶೋಕ್, ಕಿರಿಯ ಇಂಜಿನಿಯರ್(ವಿ), ಸತ್ಯಮಂಗಲ ಶಾಖೆ, ನಗರ ಉಪವಿಭಾಗ, ಹಾಸನ.

**ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಹೆಸರು:**

1. ಶ್ರೀ ಜಿ.ಕೆ ಲಲಿತ್ ಕುಮಾರ್, ಅಧ್ಯಕ್ಷರು ಹಾಗೂ ಸದಸ್ಯರುಗಳು, ಶ್ರೀ ಮಾರುತಿ ಕ್ಷೇಮಾಭಿವೃದ್ಧಿ ಸಂಘ (ರಿ), ಬಿ.ಕಾಟಿಹಳ್ಳಿ , ಹಾಸನ.
2. ಶ್ರೀ ರಮೇಶ್ ಕುಮಾರ್, ಕೆ ಹೆಚ್ ಬಿ ಬಡಾವಣೆ, ಹಾಸನ

**ಉಲ್ಲೇಖ :** 1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಸುತ್ತೋಲೆ ಪತ್ರ ಸಂಖ್ಯೆ: 316-37/03.05.2017

********

ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಲು ನಗರ ಉಪ-ವಿಭಾಗ ಕಛೇರಿಯಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ಸಭೆಯನ್ನು 1:30 ಗಂಟೆಗೆ ಮುಕ್ತಾಯಗೊಳಿಸಿದರು.

1. ಶ್ರೀ ಮಾರುತಿ ಕ್ಷೇಮಾಭಿವೃದ್ಧಿ ಸಂಘ (ರಿ), ಬಿ.ಕಾಟಿಹಳ್ಳಿ , ಹಾಸನದ ಅಧ್ಯಕ್ಷರಾದ ಶ್ರೀ ಜಿ.ಕೆ ಲಲಿತ್ ಕುಮಾರ್ ರವರು ಸಭೆಯಲ್ಲಿ ಹಾಜರಿದ್ದು, ಬಿ.ಕಾಟಿಹಳ್ಳಿ ಹಾಗೂ ಸುತ್ತಮುತ್ತ ಹಳ್ಳಿಗಳ ವ್ಯಾಪ್ತಿಗೆ ಬರುವಂತಹ ನಾಗರೀಕರ ವಿದ್ಯುತ್ ಬಿಲ್ಲನ್ನು ಪಾವತಿ ಮಾಡಲು ವಿದ್ಯುತ್ ಬಿಲ್ ಪಾವತಿ ಮಾಡುವ ಯಂತ್ರವು (ATP) ಲಭ್ಯವಿಲ್ಲದ ಕಾರಣ ಬಿ.ಕಾಟಿಹಳ್ಳಿ ವ್ಯಾಪ್ತಿಯಲ್ಲಿ ವಿದ್ಯುತ್ ಬಿಲ್ ಪಾವತಿ ಮಾಡುವ ಯಂತ್ರವನ್ನು ಅಳವಡಿಸಿ ಗ್ರಾಹಕರಿಗೆ ಅನುಕೂಲ ಮಾಡಿಕೊಡಬೇಕಾಗಿ ಈ ಹಿಂದೆ ದಿನಾಂಕ: 13.10.2017 ರಂದು ನಡೆದ ಜನ ಸಂಪರ್ಕ ಸಭೆಯಲ್ಲಿ ಸಲ್ಲಿಸಿದ್ದ ಕೋರಿಕೆಯ ಕುರಿತು ವಿವರ ಕೋರಿದರು. ಈ ವಿಷಯ ಕುರಿತಾಗಿ ಪ್ರತಿಕ್ರಿಯಿಸಿದ ಸಭಾ ಅಧ್ಯಕ್ಷರು ವಿದ್ಯುತ್ ಬಿಲ್

ಪಾವತಿ ಮಾಡುವ ಯಂತ್ರವನ್ನು (ATP) ಅಳವಡಿಸುವ ಕುರಿತಾಗಿ ಈಗಾಗಲೇ ಮೇಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುವ ವಿವರವನ್ನು ಸದರಿಯವರ ಗಮನಕ್ಕೆ ತರಬಯಸಿದರು.

2. ಶ್ರೀ ರಮೇಶ್ ಕುಮಾರ್, ಕೆ ಹೆಚ್ ಬಿ ಬಡಾವಣೆ, ಹಾಸನ ರವರು ಸಭೆಯಲ್ಲಿ ಹಾಜರಿದ್ದು, ಸದರಿಯವರ ಮನೆಯ( ಮನೆ ನಂ: 906) ಪಕ್ಕದಲ್ಲಿನ ಕಂಬವನ್ನು ಸ್ಥಳಾಂತರಿಸದಿರುವ ಕುರಿತು ಮನವಿಯನ್ನು ಸಲ್ಲಿಸಿದರು. ಈ ಕುರಿತು ಸಭಾ ಅಧ್ಯಕ್ಷರು ಸ್ಥಳ ಪರೀಶೀಲಿಸಿ ನಿಗಮ ನಿಯಾಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ನಗರ ಉಪ-ವಿಭಾಗಾಧಿಕಾರಿಯವರಿಗೆ ಸೂಚಿಸಿದರು.

04/02/18

**ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),**
**ನಗರ ಉಪವಿಭಾಗ, ಹಾಸನ.**

ಪ್ರತಿಯನ್ನು ಸಲ್ಲಿಸಿದೆ:

1. ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ), ನಿಗಮ ಕಛೇರಿ, ಚಾ.ವಿ.ಸ.ನಿ.ನಿ., ಮೈಸೂರು ರವರ ಆದ್ಯ ಅವಗಾಹನೆಗಾಗಿ.
2. ಮುಖ್ಯ ಇಂಜಿಯರ್(ವಿ), ವಲಯ ಕಚೇರಿ, ಚಾ.ವಿ.ಸ.ನಿ.ನಿ., ಮೈಸೂರು ರವರ ಆದ್ಯ ಅವಗಾಹನೆಗಾಗಿ.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಹಾಸನ ರವರ ಆದ್ಯ ಅವಗಾಹನೆಗಾಗಿ.
4. ಕಾರ್ಯಪಾಲಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಹಾಸನ ರವರ ಆದ್ಯ ಅವಗಾಹನೆಗಾಗಿ.
5. ಎಲ್ಲಾ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್, ನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಹಾಸನ ರವರಿಗೆ ಸಭೆಯಲ್ಲಿ ಚರ್ಚಿಸಲಾದ ವಿಷಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ತಿಳಿಸಲಾಗಿದೆ.
6. ಕಡತಕ್ಕೆ.